ಪೋಸ್ಟ್ ಮುಖಾಂತರ ಅವರ ವಿಳಾಸಕ್ಕೆ ಕಳುಹಿಸಿಕೊಡುವ ವ್ಯವಸ್ಥೆ ಮಾಡಿಕೊಡಲಾಗಿದೆ.

ಮುಂದುವರೆದು ಮುದ್ರಿತ ಪ್ರಮಾಣ ಪತ್ರಗಳ ಬದಲಿಗೆ ಕಾಗದ ರಹಿತ ಪ್ರಮಾಣ ಪತ್ರಗಳ ಸೇವೆಯನ್ನು ಅನುಷ್ಠಾನಗೊಳಿಸಲು ಕಂಇ 44 ಭೂದಾಅ 2014; ದಿನಾಂಕ: 19.02.2014 ರಲ್ಲಿ ಸರ್ಕಾರವು ಆದೇಶ. ಸದರಿ ಆದೇಶದನ್ವಯ ಕಾಗದ ರಹಿತ ಪ್ರಮಾಣ ಪತ್ರಗಳ ಸೇವೆಯನ್ನು ಸಾರ್ವಜನಿಕರಿಗೆ ನೀಡಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಈ ವ್ಯವಸ್ಥೆಯಡಿಯಲ್ಲಿ ಸಾರ್ವಜನಿಕರಿಗೆ ಗಣಕೀಕೃತವಾಗಿ ಅನುಮೋದಿಸಲ್ಪಟ್ಟ ಪ್ರಮಾಣ ಪತ್ರಗಳನ್ನು ನೀಡದೇ ಪ್ರಮಾಣ ಪತ್ರದ ಗಣಕೀಕೃತ ಸಂಖ್ಯೆಯನ್ನು ಎಸ್ಎಂಎಸ್ ಮೂಲಕ ನೀಡಲಾಗುವುದು. ಈ ಗಣಕೀಕೃತ ಪ್ರಮಾಣ ಪತ್ರದ ಸಂಖ್ಯೆಯನ್ನು ನಾಗರೀಕರು ಬೇರೆ ಇಲಾಖೆಗಳಲ್ಲಿ ಸೌಲಭ್ಯ ಪಡೆಯಲು ಸಲ್ಲಿಸುವ ಅರ್ಜಿಯಲ್ಲಿ ನಮೂದಿಸಿದ್ದಲ್ಲಿ, ಸಂಬಂಧಿಸಿದ ಇಲಾಖೆಯವರು ಈ ಗಣಕೀಕೃತ ಸಂಖ್ಯೆಯ ಪ್ರಮಾಣ ಪತ್ರದ ಸಿಂಧುತ್ವ/ನೈಜತೆಯನ್ನು ನಾಡಕಛೇರಿ ದತ್ತಾಂಶದ ಮೂಲಕ ಪಡೆದು ಪರಿಶೀಲಿಸಬಹುದಾಗಿದೆ.

ವೇದಗಂಗಾ ನದಿಗೆ ಬ್ರಿಡ್ಜ್–ಕಂ–ಬಾಂದಾರ ನಿರ್ಮಾಣ

921 (1550); ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್

ಅ) ಚಿಕ್ಕೋಡಿ ತಾಲ್ಲೂಕಿನ ಜತ್ರಾಟ ಗ್ರಾಮದ ಹತ್ತಿರ ಇರುವ ವೇದಗಂಗಾ ನದಿಯಲ್ಲಿ ಒಳ ಹರಿವು ಯಾವ ಯಾವ ಅವಧಿಯಲ್ಲಿ ಎಷ್ಟು ಇತ್ತು; ಕಳೆದ ಒಂದು ವರ್ಷದಿಂದ ಈವರೆಗೂ ಒಳ ಹರಿವು ಇದೆಯೇ; ಇಲ್ಲವಾದಲ್ಲಿ, ಜತ್ರಾಟ ಗ್ರಾಮದ ಹತ್ತಿರ ಬ್ರಿಡ್ಜ್–ಕಂ–ಬಾಂದಾರ ಕಾಮಗಾರಿಯನ್ನು ಪ್ರಾರಂಭಿಸದಿರಲು ಕಾರಣವೇನು; ಇದರಿಂದ ಸಾರ್ವಜನಿಕರು ಅನುಭವಿಸುತ್ತಿರುವ ತೊಂದರೆಯು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈವರೆಗೂ ಕಾಮಗಾರಿಯನ್ನು ಆರಂಭಿಸದಿರುವುದಕ್ಕೆ ಹಾಗೂ ಸರ್ಕಾರದ ಅನುದಾನವನ್ನು ಸಕಾಲದಲ್ಲಿ ಸದ್ಬಳಕೆ ಮಾಡದೇ ಇರುವುದಕ್ಕೆ ಗುತ್ತಿಗೆದಾರರ ಮೇಲೆ ಅಥವಾ ಅಧಿಕಾರಿಗಳ ಮೇಲೆ ಯಾವುದಾದರೂ ಶಿಸ್ತಿನ ಕ್ರಮವನ್ನು ಜರುಗಿಸಲಾಗಿದೆಯೇ; ಹಾಗಿದ್ದಲ್ಲಿ ಯಾವ ಕ್ರಮ ಜರುಗಿಸಲಾಗಿದೆ;

ಇ) ಇಲ್ಲವಾದಲ್ಲಿ, ಸರ್ಕಾರವು ಕ್ರಮ ಕೈಗೊಳ್ಳದಿರಲು ಕಾರಣವೇನು; ಕಾಮಗಾರಿಯನ್ನು ಪಡೆದ ಗುತ್ತಿಗೆದಾರರ ಹೆಸರನ್ನು ಕಪ್ಪುಪಟ್ಟಿಗೆ ಸೇರಿಸುವುದರೊಂದಿಗೆ ಕಾಮಗಾರಿಗೆ ಮತ್ತೊಮ್ಮೆ ಟೆಂಡರ್ ಆಹ್ವಾನಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಈ) ಹಾಗಿದ್ದಲ್ಲಿ, ಈ ಪ್ರಕ್ರಿಯೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಶಿವರಾಜ್ ಎಸ್. ತಂಗಡಗಿ (ಮಾನ್ಯ ನೀರಾವರಿ ಸಚಿವರು)

ಅ) ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಜತ್ರಾಟ ಗ್ರಾಮದ ಹತ್ತಿರ ವೇದಗಂಗಾ ನದಿಯಲ್ಲಿ ಮಳೆಗಾಲದಲ್ಲಿ ನೀರು ಪೂರ್ಣ ಪ್ರಮಾಣದಲ್ಲಿ ಅಂದರೆ ಜೂನ್ ನಿಂದ ಅಕ್ಟೋಬರ್ ತಿಂಗಳವರೆಗೆ ಹರಿಯುತ್ತದೆ. ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ಅಂತರ್‌ರಾಜ್ಯ ಒಡಂಬಡಿಕೆ ಪ್ರಕಾರ ನವೆಂಬರ್ ತಿಂಗಳಿನಿಂದ ಮೇ ತಿಂಗಳ ವರೆಗೆ ಕಾಳಮ್ಮವಾಡಿ ಜಲಾಶಯದಿಂದ ನದಿಗೆ ನೀರು ಬಿಡಲಾಗುತ್ತಿದೆ. ಈ ಕಾರಣದಿಂದ ಹಾಗೂ ಮಾನ್ಯ ಶಾಸಕರು, ನಿಪ್ಪಾಣಿ ಮತಕ್ಷೇತ್ರ ಇವರು ಪ್ರಸ್ತಾಪಿತ ಜತ್ರಾಟ ಬ್ಯಾರೇಜಿನ ಎತ್ತರ ಹೆಚ್ಚಿಸಲು ಕೋರಿದ್ದರಿಂದ ಪ್ರಸ್ತಾವನೆಯನ್ನು ತಯಾರಿಸಿ ಪರಿಶೀಲಿಸಲಾಯಿತು. ಈ ಕಾಮಗಾರಿಯು ನಬಾರ್ಡ್ (ಆರ್.ಐ.ಡಿ.ಎಫ್–18) ಸಾಲ ಸೌಲಭ್ಯದಡಿ ಕಾಲಮಿತಿಯೊಳಗೆ ಕೈಗೊಂಡು ಪೂರ್ಣಗೊಳಿಸಬೇಕಾಗಿರುವುದರಿಂದ ಈಗಾಗಲೇ ಅನುಮೋದಿತ ಕಾಮಗಾರಿಯನ್ನು ಅಂಗೀಕರಿಸಿರುವ ಟೆಂಡರಿಗೆ ಅನುಗುಣವಾಗಿ ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದೆ. ಈ

ಹಿನ್ನೆಲೆಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ವಿಳಂಬವಾಗಿರುತ್ತದೆ. ನೀರಿನ ಹರಿವು ಕಡಿಮೆಯಾದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು.

ಆ) ಮತ್ತು ಇ) ಮೇಲೆ ವಿವರಿಸಿದಂತೆ ಗುತ್ತಿಗೆದಾರರು ಅಥವಾ ಅಧಿಕಾರಿಗಳು ಕಾಮಗಾರಿ ಪ್ರಾರಂಭಿಸದಿರಲು ಕಾರಣವಾಗಿಲ್ಲವಾದ್ದರಿಂದ ಶಿಸ್ತು ಕ್ರಮ ಜರುಗಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಈ) ಕಾಮಗಾರಿಯನ್ನು ಪಡೆದ ಗುತ್ತಿಗೆದಾರರಿಂದ ಕೂಡಲೇ ಕಾಮಗಾರಿಯನ್ನು ನಿರ್ವಹಿಸಿ ಪೂರ್ಣಗೊಳಿಸಲಾಗುವುದು.

ಸಣ್ಣ ನೀರಾವರಿ ಕೆರೆಗಳು

922 (1551); ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್

ಅ) ನಿಪ್ಪಾಣಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಗ್ರಾಮಗಳಲ್ಲಿರುವ ಸಣ್ಣ ನೀರಾವರಿ ಕೆರೆಗಳು ಎಷ್ಟು; ಅವುಗಳ ಸರ್ವೆ ನಂಬರ್ ವಿಸ್ತೀರ್ಣ ಎಷ್ಟು; (ಗ್ರಾಮವಾರು ವಿವರ ನೀಡುವುದು)

ಆ) ಕೆರೆಗಳಲ್ಲಿನ ಹೂಳು ತೆಗೆಯದೆ ಇರುವುದರಿಂದ ನೀರಿನ ಸಮಸ್ಯೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಳೆದ ಮೂರು ವರ್ಷಗಳಲ್ಲಿ ಯಾವ ಕೆರೆಗಳಲ್ಲಿ ಹೂಳನ್ನು ತೆಗೆಯಲಾಗಿದೆ; ಇದಕ್ಕಾಗಿ ಬಿಡುಗಡೆಯಾದ ಹಾಗೂ ವೆಚ್ಚವಾದ ಅನುದಾನ ಎಷ್ಟು?

ಶ್ರೀ ಶಿವರಾಜ್ ಎಸ್. ತಂಗಡಗಿ (ಮಾನ್ಯ ನೀರಾವರಿ ಸಚಿವರು)

ಅ) ಬೆಳಗಾವಿ ಜಿಲ್ಲೆಯ ನಿಪ್ಪಾಣಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 4 ಸಣ್ಣ ನೀರಾವರಿ ಕೆರೆಗಳಿವೆ ಅವುಗಳ ಸರ್ವೆ ನಂಬರ್ ಮತ್ತು